ದೇವಸ್ಥಾನ ಮತ್ತು ಐಕ್ಯ ಮಂಟಪವನ್ನು ಉಳಿಸಿಕೊಳ್ಳಬೇಕೆಂದು ತೀರ್ಮಾನವಾಗಿತ್ತು. ೧೯೭೮-೭೯ರಲ್ಲಿ ಇದನ್ನು ಪುನರ್ ವಿಮರ್ಶಿಸಲಾಗಿ ಮಂಟಪದ ಡಿಸೈನ್ ಬದಲಾವಣೆಯಾಗಿದೆ. ೧೯೮೨ರಲ್ಲಿ ಮತ್ತೆ ಪುನಃ ಅದರ ಬಗ್ಗೆ ನಮ್ಮ ವಿಶ್ವಸ್ಥ ಸಮಿತಿಯವರು, ರಾಜಕಾರಣಿಗಳು, ಮಠಾಧಿಪತಿಗಳು ಮತ್ತು ತಾಂತ್ರಿಕಜ್ಞರು ಎಲ್ಲರೂ ಸೇರಿಕೊಂಡಿದ್ದಾರೆ. ಇವರೆಲ್ಲರ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು ಅಂತಿಮವಾಗಿ ನಿರ್ಣಯ ಮಾಡಿರುವುದರಿಂದ ಈಗ ಇರತಕ್ಕಂಥ ಐಕ್ಯ ಮಂಟಪವನ್ನು ಹಾಗೆಯೇ ಉಳಿಸಿಕೊಳ್ಳಬೇಕು. ಇದಕ್ಕೆ ಎಷ್ಟೇ ಹಣ ಖರ್ಚಾದರೂ ಸರಿ, ಪ್ಲೈ ಓವರ್ ಬ್ರಿಡ್ಜ್ ಕಟ್ಟಿ ದೇವಸ್ಥಾನಕ್ಕೆ ನೀರು ಬಂದಾಗಲೆಲ್ಲ ಲಿಂಗವು ಮುಳುಗಿದರೆ ಭಕ್ತಾದಿಗಳು ಹೋಗಲು ಸಾಧ್ಯವಾಗುವುದಿಲ್ಲವೆಂದು ಮೇಲುಗಡೆ ಇದೇ ಲಿಂಗವನ್ನು ಹಾಕತಕ್ಕಂಥ ಡಿಸೈನ್ ಹಾಕಿ, ದೇವಸ್ಥಾನಕ್ಕೆ ಪ್ಲೈ ಓವರ್ ಬ್ರಿಡ್ಜ್ ಮಾಡಬೇಕೆಂದೂ ಮತ್ತು ಐಕ್ಯ ಮಂಟಪ ಏನು ಇದೆ ಅದಕ್ಕೆ ಮೆಸನರಿ ವಾಲ್ ಆ ಜಾಗಕ್ಕೆ ಕಟ್ಟಿ ಅದನ್ನು ಶಾಶ್ವತವಾಗಿ ಉಳಿಸಿಕೊಳ್ಳತಕ್ಕಂಥದ್ದು ಮತ್ತು ಕೆಳಗಡೆ ಇರತಕ್ಕಂಥ ಲಿಂಗವನ್ನು ಭಯವಿಲ್ಲದ ರೀತಿಯಲ್ಲಿ ಕೇಳಲಿಕ್ಕೆ ಹೋದರೆ ಡ್ಯಾಮೇಜ್ ಆಗುತ್ತದೆಂದು ಬಹಳ ಸೂಕ್ಷ್ಮವಾಗಿ ಪರಿಶೀಲನೆ ಮಾಡಿ, ಅದನ್ನು ಉಳಿಸಿಕೊಳ್ಳಬೇಕೆಂದು ಸಂಪೂರ್ಣವಾಗಿ ಚರ್ಚೆಮಾಡಿ ನಿರ್ಣಯ ಮಾಡಿದ್ದಾರೆ. ನಮ್ಮ ಕರ್ನಾಟಕದಲ್ಲಿರತಕ್ಕಂಥ ಎಲ್ಲಾ ಧರ್ಮ ಪೀಠದ ಮುಖ್ಯಸ್ಥರು, ಸುತ್ತೂರು ಸ್ವಾಮೀಜಿಯವರು, ತೊಂಟಾರಾಧ್ಯ ಸ್ವಾಮಿಗಳು ಎಲ್ಲರೂ ಸೇರಿದ್ದಾರೆ. ಇದರಲ್ಲಿ ರಾಜಕಾರಣಿಗಳೂ ಸೇರಿದ್ದಾರೆ. ಮಾಜಿ ಉಪರಾಷ್ಟ್ರಪತಿಯವರೂ, ದೊಡ್ಡ ದೊಡ್ಡ ಮುಖಂಡರು ಸೇರಿರುತ್ತಾರೆ. ಮತ್ತೆ ಇದರ ಬಗ್ಗೆ ಈಗಾಗಲೇ ೧೧೫ ಲಕ್ಷ ೧೨೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ನಮ್ಮ ಕರ್ನಾಟಕದಲ್ಲಿರತಕ್ಕಂಥ ತಾಂತ್ರಿಕಜ್ಞರು ಏನೂ ಕಡಿಮೆ ಇಲ್ಲ. ಅವರ ಹೆಸರುಗಳನ್ನು ತೆಗೆದರೆ ಇನ್ನೊಬ್ಬರಿಗೆ ಪೂಜೆಕ್ಕೆ ಸಿಟ್ಟಾಗುತ್ತದೆಂದು ಇದು ಸೂಕ್ಷ್ಮವಾದ ಜಟಿಲವಾದ ಸಮಸ್ಯೆಯಾಗಿ ಇರುವುದರಿಂದ ಈ ದೇಶದ ಜನತೆಯ ಮುಂದೆ ಒಪ್ಪಿಸಿ ಮಾನ್ಯ ಮುಖ್ಯ ಮಂತ್ರಿಗಳು ಮನವಿಯನ್ನು ಕೂಡ ಹೇಳಿದ್ದಾರೆ. ಮನವಿಯನ್ನು ಮಾಡಿದಮೇಲೆ ಮಾನ್ಯ ತೊಂಟಾರಾಧ್ಯ ಸ್ವಾಮಿಗಳು ಹೇಳಿದರು ಹಿಂದೆ ಮಾಡಿರತಕ್ಕಂಥ ತೀರ್ಮಾನವೇ ಸರಿಯಾಗಿದೆ ಬದಲಾವಣೆ ಮಾಡಕೂಡದು ಎಂದು ಹೇಳಿದ್ದಾರೆ. ನಾನು ಹಿಂದೆ ಒಂದು ಪ್ರಾರಂಭಕ್ಕೆ ಅರಸೀಕೆರೆಗೆ ಹೋಗಿದ್ದಾಗ ಸಿರಿಗೆರೆ ಸ್ವಾಮೀಜಿಗಳು ಹಿಂದೆ ಆಗಿರತಕ್ಕಂಥ ತೀರ್ಮಾನವನ್ನು ಬದಲಾವಣೆ ಮಾಡಬಾರದೆಂದು ಹೇಳಿದ್ದಾರೆ. ರಾಜಕಾರಣಿಗಳು ಬದಲಾವಣೆ ಮಾಡಲಿಕ್ಕೆ ಹೊರಟಿದ್ದಾರೆಂದು ಹೇಳಿದ್ದಾರೆ. ಇದು ಏನೇ ಆಗಲಿ ಇಂಥ ವಿಷಯದ ಬಗ್ಗೆ ಒಂದು ಅಭಿಪ್ರಾಯಕ್ಕೆ ಬಂದು ಅವರ ಮನಸ್ಸಿಗೆ ಬೇಸರ ಬರಕೂಡದೆಂದು ಹೇಳಿ ನಮ್ಮ ರಾಜ್ಯದ ಹೊರಗಿನ ತಾಂತ್ರಿಕಜ್ಞರನ್ನು ನೇಮಕ ಮಾಡಿ ಅವರು ಕೊಟ್ಟಿರತಕ್ಕಂಥ ಮೆಮೊರಾಂಡಮ್‌ನ್ನು ಸರ್ಕಾರಕ್ಕೆ ಸಬ್‌ಮಿಟ್ ಮಾಡಿದ್ದೇವೆ. ಅದರ ಬಗ್ಗೆ ತಾಂತ್ರಿಕಜ್ಞರ ಅಭಿಪ್ರಾಯವನ್ನು ತೆಗೆದುಕೊಂಡು ರಾಜ್ಯದ ತಾಂತ್ರಿಕಜ್ಞರ ಬಗ್ಗೆ ಕೊರತೆ ಇದ್ದುದರಿಂದ ಜಿಜ್ಞಾಸೆ ಬಂದಿದೆ. ಹೀಗೆಯೇ ಮಾಡಬೇಕೆಂದು ಒಬ್ಬರು ಹೇಳಿದರೆ, ಹಿಂದಿನದೇ ಸರಿಯಾಗಿದೆ ಎಂದು ಇದು ಬೇಡವೆಂದು ಮತ್ತೊಬ್ಬರು ಹೇಳುತ್ತಿರುತ್ತಾರೆ. ಮತ್ತೆ ಈ ರಾಜ್ಯದ ತಾಂತ್ರಿಕಜ್ಞರು ತಮ್ಮ ಮೆಮೊರಾಂಡಮ್‌ನಲ್ಲಿ ಏನು ಸೂಚಿಸಿದ್ದಾರೆ ಅದೆಲ್ಲಾ ವಿಷಯಗಳನ್ನು ಪರಿಶೀಲನೆ ಮಾಡಿ, ಮಠಾಧೀಶ್ವರರು ರಾಜಕಾರಣಿಗಳು ಮತ್ತು ಸಮಾಜದ ಮುಖಂಡರನ್ನು ಕರೆಯಿಸಿ, ಹೊಸ ತಾಂತ್ರಿಕಜ್ಞರು ಕೊಟ್ಟಿರತಕ್ಕಂಥದ್ದು ಏನು ಮೆಮೊರಾಂಡಮ್ ಇರುತ್ತದೆ. ಅದರ ಆಧಾರದ ಮೇಲೆ ನಿರ್ಣಯ ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಬೆಂಗಳೂರು–ಮೈಸೂರು ರೈಲು ಮಾರ್ಗವನ್ನು ಮೀಟರ್ ಗೇಜ್‌ನಿಂದ ಬ್ರಾಡ್ ಗೇಜಾಗಿ ಪರಿವರ್ತಿಸುವ ಬಗ್ಗೆ

೭೯೯. ಶ್ರೀ ಪಿ. ಎಂ. ಚಿಕ್ಕಬೋರಯ್ಯ (ಚಾಮರಾಜ).—ಮಾನ್ಯ ಲೋಕೋಪಯೋಗಿ ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೈಸೂರು ಬೆಂಗಳೂರುಗಳ ರೈಲ್ವೆ ಮಾರ್ಗವನ್ನು ಮೀಟರ್‌ಗೇಜ್‌ನಿಂದ ಬ್ರಾಡ್ ಗೇಜ್‌ಗೆ ಪರಿವರ್ತಿಸಲು ಕೆಲಸ ಪ್ರಾರಂಭಿಸಿ ಎಷ್ಟು ವರ್ಷವಾಯಿತು ?

ಅ) ಇಲ್ಲಿಯವರೆಗೆ ಆ ಕಾರ್ಯ ಮಂದಗತಿಯಲ್ಲಿ ನಡೆಯುತ್ತಿರುವುದಕ್ಕೆ ಕಾರಣವೇನು ?

ಇ) ಈ ಬಗ್ಗೆ ಕೇಂದ್ರ ಸರ್ಕಾರದ ಗಮನ ಸೆಳೆಯಲು ರಾಜ್ಯ ಸರ್ಕಾರ ಏನು ಕ್ರಮ ತೆಗೆದು ಕೊಂಡಿದೆ ?

ಈ) ಈ ಕೆಲಸ ಎಷ್ಟು ವರ್ಷಗಳಲ್ಲಿ ಪೂರ್ಣವಾಗುವ ನಿರೀಕ್ಷಣೆಯಿದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಸುಮಾರು ೮ ವರ್ಷಗಳಾಯಿತು.

ಆ) ಸಾಕಷ್ಟು ಹಣವನ್ನು ಒದಗಿಸದೆ ಇರುವುದರಿಂದ.

ಇ) ಈ ಕೆಲಸವನ್ನು ಬೇಗ ಮುಗಿಸಲು ಹೆಚ್ಚು ಅನುದಾನವನ್ನು ಕೊಡಬೇಕೆಂದು ಕೇಂದ್ರ ಸರ್ಕಾರವನ್ನು ರಾಜ್ಯ ಸರ್ಕಾರವು ಒತ್ತಾಯಿಸುತ್ತಲೇ ಇದೆ.

ಈ) ಇದು ಕೇಂದ್ರ ಸರ್ಕಾರದವರು ಒದಗಿಸುವ ಅನುದಾನದ ಮೇಲೆ ಅವಲಂಭಿಸುತ್ತದೆ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಈ ಕೆಲಸ ಪ್ರಾರಂಭವಾಗಿ ೮ ವರ್ಷವಾಗಿದೆ. ಇದಕ್ಕೆ ಪ್ರತಿ ವರ್ಷ೫೦ ಲಕ್ಷ ರೂಪಾಯಿಗಳನ್ನು ಮಾತ್ರ ಕೊಡುತ್ತಿದ್ದಾರೆಂದು ನಮ್ಮ ಗಮನಕ್ಕೆ ಬಂದಿದೆ. ೫೦ ಲಕ್ಷದಲ್ಲಿ ೪೦ ಲಕ್ಷ ರೂಪಾಯಿಗಳು ಎಸ್ಟಾಬ್ಲಿಷ್‌ಮೆಂಟಿಗೆ ಹೋಗುತ್ತಿದೆ. ಉಳಿದ ೧೦ ಲಕ್ಷ ರೂಪಾಯಿಗಳಿಂದ ಒಂದೊಂದು ಬ್ರಿಡ್ಜ್ ಮಾಡುತ್ತಿದ್ದಾರೆ. ಬಹುಶಃ ಈ ರೀತಿಯಾದರೆ ನಮ್ಮ ಜೀವಂತ ಕಾಲದಲ್ಲಿ ಬ್ರಾಡ್‌ಗೇಜ್ ಆಗಲಾರದೆಂದು ನನ್ನ ಭಾವನೆ. ಸರ್ಕಾರ ಇಲ್ಲಿಯವರೆಗೆ ಏನು ಕ್ರಮ ತೆಗೆದುಕೊಂಡಿದೆ ಮತ್ತು ಇದಕ್ಕಾಗಿ ಕೇಂದ್ರ ಸರ್ಕಾರದವರು ಎಷ್ಟು ಹಣವನ್ನು ವಿನಿಯೋಗಿಸಿದ್ದಾರೆಂಬುದನ್ನು ಮಂತ್ರಿಗಳು ತಿಳಿಸುವರೆ ?

ಶ್ರೀ ಹೆಚ್. ಡಿ. ದೇವೇಗೌಡ.—೧೯೮೬-೮೭ರಲ್ಲಿ ೧೪೯ ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಅದರ ಹಿಂದಿನ ವರ್ಷಗಳಲ್ಲಿ ೧೨ ಲಕ್ಷ, ೪೭ ಲಕ್ಷ, ೪೬ ಲಕ್ಷ, ೧೫೦ ಲಕ್ಷ, ೧೦೦ ಲಕ್ಷ, ೫೦ ಲಕ್ಷ ಹೀಗೆ ಇಟ್ಟುಕೊಂಡು ಬಂದಿದ್ದಾರೆ. ಈಗ ಪತ್ರಿಕೆಯಲ್ಲಿ ಓದಿದ್ದೇವೆ, ಮುಂದಿನ ವರ್ಷಕ್ಕೆ ೨೦೦ ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ ಎಂದು. ಪಾರ್ಲಿಮೆಂಟ್ ಸದಸ್ಯರು ಅತೃಪ್ತಿ ವ್ಯಕ್ತಪಡಿಸಿ ಪ್ರತಿಭಟನೆ ಮಾಡಿದ್ದಾರೆ. ನಾವು ಏನೆಲ್ಲ ಮಾಡಬೇಕೋ ಅದನ್ನೆಲ್ಲಾ ಮಾಡಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಪ್ರತಿಭಟನೆ ಮಾಡಿ ಬರೆದಿರತಕ್ಕ ಪತ್ರದ ಕೈಪಿಡಿ ಬಹುಶಃ ಎಲ್ಲಾ ಸದಸ್ಯರಿಗೆ ಸೇರಿರಬಹುದು. ಕೇಂದ್ರದೊಡನೆ ಮಾಡಿದ ವ್ಯವಹಾರಗಳು, ಟಿಪ್ಪಣಿ ಏನಿದೆ ಅದನ್ನೆಲ್ಲಾ ಪುಸ್ತಕ ರೂಪದಲ್ಲಿ ಅಚ್ಚು ಹಾಕಿಸಿ ಕೊಟ್ಟಿದ್ದಾರೆ. ಸರ್ಕಾರ ಏನೇನು ಮಾಡಿದೆ ಎಂಬುದು ತಮಗೂ ಗೊತ್ತಿದೆ. ನಾವು ಹೋದಾಗಲೆಲ್ಲ ಪಾರ್ಲಿಮೆಂಟ್ ಸದಸ್ಯರಿಗೆ ಪ್ರತಿ ಅಧಿವೇಶನದಲ್ಲೂ ಒತ್ತಾಯಿಸಬೇಕೆಂದು ಹೇಳುತ್ತೇವೆ. ಒಟ್ಟು ಸಾರಾಂಶ ಹೇಳುವುದಾದರೆ, ಕೇಂದ್ರ ಸರ್ಕಾರ ಎಷ್ಟು ಅದ್ಯತೆ ಕೊಡಬೇಕಾಗಿತ್ತೊ, ಅಷ್ಟನ್ನು ಇಷ್ಟೆಲ್ಲಾ ಒತ್ತಡ ತಂದರೂ ಕೊಟ್ಟಿಲ್ಲವೆಂದು ವಿಷಾದದಿಂದ ಹೇಳಬೇಕಾಗುತ್ತದೆ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಆದ್ಯತೆ ಕೊಡುವ ಹಾಗೆ ಮಂತ್ರಿಗಳು ಪ್ರಯತ್ನ ಮಾಡುವರೆ ?

ಶ್ರೀ ಹೆಚ್. ಡಿ. ದೇವೇಗೌಡ.—ಪ್ರಯತ್ನ ನಮ್ಮದು, ತೀರ್ಮಾನ ಅವರದ್ದು.

ಅಧ್ಯಕ್ಷರು.—ಶ್ರೀ ಕೆ. ಹೆಚ್. ಶ್ರೀನಿವಾಸ್ ಅವರ ೧೧೫೩ನೇ ಪ್ರಶ್ನೆಯನ್ನು ಮುಂದೂಡಲಾಗಿದೆ.